

# ಕೌಬಾಯ್‌ಗಳ 'ಕೌಟೌನ್' ಈಗಿನ ಫೋರ್ಟ್ ವರ್ತ್



**ಅಮೆರಿಕದ ಫೋರ್ಟ್ ವರ್ತ್ ನಗರದ ವಿಶೇಷ ಇರುವುದು ಅದರ ಚರಿತ್ರೆಯಲ್ಲಿ. ಸಾಹಸಿ ಕೌಬಾಯ್ ಕುದುರೆ ಸವಾರರು, ಉದ್ದ ಕೋಡಿನ ಜಾನುವಾರು ಪರಂಪರೆ ಜೊತೆಗೆ, ವಿಶಾಲವಾದ ಮರಳುಗಾಡಿನಂತಿದ್ದ ಪ್ರದೇಶ ದೊಡ್ಡ ವಾಣಿಜ್ಯಿಕ ನಗರವಾಗಿ ಬೆಳೆದುಬಂದ ಹಾದಿಯ ಪರಿಚಯವನ್ನು ನಗರವೇ ಮಾಡಿಕೊಡುತ್ತದೆ.**

**■ ಸರಸ್ವತಿ ಶಂಕರ್**

ಅಮೆರಿಕದ ಟೆಕ್ಸಾಸ್ ಪ್ರಾಂತ್ಯದ ಡಾಲಸ್–ಫೋರ್ಟ್ ವರ್ತ್ ವಿಮಾನ ನಿಲ್ದಾಣದಿಂದ ಪಶ್ಚಿಮಕ್ಕೆ 25 ಮೈಲಿ ದೂರದಲ್ಲಿ 'ಫೋರ್ಟ್ ವರ್ತ್' ಎಂಬ ಐತಿಹಾಸಿಕ ನಗರವಿದೆ. ಈ ಬಾರಿ ಅಮೆರಿಕಕ್ಕೆ ಹೋದಾಗ ಅಲ್ಲಿಗೆ ಭೇಟಿ ನೀಡುವ ಅವಕಾಶ ನನ್ನದಾಯಿತು. ನನ್ನ ಮಗ ವಾಸವಿರುವುದು ಡಾಲಸ್ ನಗರದ ಹೊರವಲಯದಲ್ಲಿರುವ ಫ್ರಿಸ್ಕೋ ಪಟ್ಟಣದಲ್ಲಿ. ಅಲ್ಲಿಂದ ಸುಮಾರು 50 ಮೈಲಿ ದೂರದಲ್ಲಿದೆ 'ಫೋರ್ಟ್ ವರ್ತ್'. ಈ ನಗರವನ್ನು ನಾನು ನೋಡಲೇಬೇಕೆಂಬುದು ಮಗನ ಒತ್ತಾಯವಾಗಿತ್ತು.

ಫ್ರಿಸ್ಕೋನಿಂದ ಒಂದು ಗಂಟೆ ಪಯಣದಲ್ಲಿ ಪಟ್ಟಣ ತಲುಪಿದೆವು. ದೂರದಿಂದ ನೋಡುತ್ತಲೇ ಇದೊಂದು ಪುರಾತನ ನಗರವೆಂಬುದು ಮನದಟ್ಟಾಯಿತು. ಹಳೆಯ ಕಾಲದ ಕೆಂಪು ಇಟ್ಟಿಗೆಗಳ ಕಟ್ಟಡಗಳು ಎಲ್ಲೆಲ್ಲೂ ರಾರಾಜಿಸುತ್ತವೆ. ಶತಮಾನ ಪೂರ್ವದ 'ಲೈವ್ ಸ್ಟಾಕ್ ಎಕ್ಸ್‌ಚೇಂಜ್' ಭವನ ಭವ್ಯವಾಗಿ ಮನಸೆಳೆಯುತ್ತದೆ. ಅದರ ಎದುರುಗಡೆಯೇ ಜಾನುವಾರುಗಳನ್ನು ಕೂಡಿಡುವ ಗೋಶಾಲೆಗಳು. ಹೊರಗಿನಿಂದ ಗೋಶಾಲೆಗಳಂತೆ ಕಂಡರೂ ಒಳಗೆ ಹೋದಾಗ ಅಲ್ಲಿರುವುದು ಬೇರೆಯೇ...

ಕಿರಾಣಿ ಅಂಗಡಿಗಳು, ಫ್ಯಾನ್ಸಿ ಸ್ಟೋರುಗಳು, ಹೋಟೆಲುಗಳು... ಇತ್ಯಾದಿ ಪ್ರವಾಸಿ ಆಕರ್ಷಣೆಗಳು. ಅಲ್ಲೊಂದು ಹೋಟೆಲಲ್ಲಿ ನಾವು ಉಪಾಹಾರ ಸವಿದೆವು. ಆ ಹೋಟೆಲ್